

# ನೇರಳೆ ಸೇಬು!

ದಿನಕ್ಕೊಂದು ಸೇಬು ತಿಂದರೆ ವೈದ್ಯರನ್ನು ದೂರವಿಡಬಹುದು. ಸಾಮಾನ್ಯವಾಗಿ ಸೇಬುಹಣ್ಣುಗಳು ಕೆಂಪು, ಹಸಿರು, ಹಳದಿ ಅಥವಾ ಈ ಮೂರೂ ಬಣ್ಣಗಳ ಮಿಶ್ರಣ ಬಣ್ಣದಲ್ಲಿರುತ್ತವೆ. ಸೂಕ್ತವಾದ ಹವಾಮಾನವಿದ್ದರೆ ಕಡು ನೇರಳೆ ಅಥವಾ ಕಪ್ಪು ಬಣ್ಣದ ಸೇಬುಗಳನ್ನೂ ಕೂಡಾ ಬೆಳೆಯಬಹುದಂತೆ!

ಕಪ್ಪು ವಜ್ರ (ಬ್ಲ್ಯಾಕ್ ಡೈಮಂಡ್) ಎಂದು ಕರೆಯಲಾಗುವ ಇಂತಹ ಅಪರೂಪದ ಸೇಬುಗಳನ್ನು ಟಿಬೆಟ್‌ನ ಪರ್ವತಗಳಲ್ಲಿ ಬೆಳೆಯಲಾಗುತ್ತಿದೆ. ಇಂಥ ಸೇಬುಗಳು ಹುಅ ನಿಯು (ಚೈನೀಸ್ ರೆಡ್ ಡೆಲಿಸಿಯಸ್) ಸೇಬುಗಳ ತಳಿಯಾಗಿದ್ದು, ಟಿಬೆಟ್‌ನ ಭೌಗೋಳಿಕ ಹವಾಗುಣದ ಕಾರಣದಿಂದ ದಟ್ಟ ನೇರಳೆ ಬಣ್ಣವನ್ನು ಪಡೆದುಕೊಳ್ಳುತ್ತವೆ.

ಸಮುದ್ರ ಮಟ್ಟಕ್ಕಿಂತ 3100 ಅಡಿಗಳಷ್ಟು ಎತ್ತರವಿರುವ ಈ ಸ್ಥಳದಲ್ಲಿ ಚೀನಾದ ಈಕಾಮರ್ಸ್ ಕಂಪನಿಯೊಂದು 50 ಹೆಕ್ಟೇರ್ ತೋಟವನ್ನು ಮಾಡಿ ಅದರಲ್ಲಿ ಈ ವಿಶೇಷ ನೇರಳೆ ಸೇಬುಗಳನ್ನು ಬೆಳೆಯುತ್ತಿದೆ. ಇಲ್ಲಿ ಹಗಲು ಮತ್ತು ರಾತ್ರಿಯ ಉಷ್ಣತೆಯ ವ್ಯತ್ಯಾಸಗಳು ಗಮನಾರ್ಹವಾಗಿದ್ದು, ಹೆಚ್ಚು ಪ್ರಮಾಣದ ಸೂರ್ಯ ಹಾಗೂ ಅತಿನೇರಳೆ ಕಿರಣಗಳನ್ನು ಪಡೆದುಕೊಳ್ಳುವ ಕಾರಣದಿಂದಾಗಿ ಗಾಢ ಕೆಂಪು ಬಣ್ಣದ ಹುಅ ನಿಯು ಸೇಬುಗಳ ಸಿಪ್ಪೆಯು ನೇರಳೆ ವರ್ಣಕ್ಕೆ ತಿರುಗುತ್ತವೆಯಂತೆ.

ಈ ತೋಟದಲ್ಲಿ ಸೇಬಿನ ಗಿಡಗಳನ್ನು 2012ರಲ್ಲಿ ನೆಡಲಾಯಿತು. ಮೂರು ವರ್ಷಗಳ ಕಠಿಣ ಪರಿಶ್ರಮದ ನಂತರ 2015ರಲ್ಲಿ ಫಲ ದೊರಕಿತು. ನೇರಳೆ ಬಣ್ಣ ಹೊಂದಿರುವ ಬ್ಲ್ಯಾಕ್ ಡೈಮಂಡ್ ಸೇಬುಗಳು ಕ್ಯಾಂಡಲ್‌ನಲ್ಲಿನ ಮೇಣದ ಹಾಗೆ ಹೊಳೆಯುತ್ತವೆ. ಹೆಸರಿಗೆ ತಕ್ಕಂತೆ ವಜ್ರದಷ್ಟೇ ಸುಂದರವಾಗಿವೆ ಎಂದು ತೋಟದ ಅಧಿಕಾರಿಯಾಗಿರುವ ವೈ. ವೆನ್ಕಿನ್ ನುಡಿದಿದ್ದಾಳೆ.

■ ವಿನಯ ಕುಮಾರ್ ಬಿ. ಹೆಚ್.

